ಶ್ರೀ ವಿಶ್ವನಾಥ @ ಆನಂದ್ ಸಿ ಮಾಮನಿ: ಗ್ರಾಮಪಂಚಾಯತಿಯಲ್ಲಿ ಹಣ ಇರುವುದಿಲ್ಲ.

(ಗೊಂದಲ)

44(15); ಶ್ರೀ ಆರ್.ವಿ. ದೇಶಪಾಂಡೆ. ಈ ವಿಷಯ ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆಗೆ ಬರುತ್ತದೆ Direct Recruitment ವಿಷಯ DPAR ಗೆ ಬರುತ್ತದೆ ತಮಗೆ ಪತ್ರ ಬರೆದಿದ್ದೇವೆ.

ಅಧ್ಯಕ್ಷರು: ಹೌದೇ? ಬೇರೆ ಇಲಾಖೆಗೆ ವರ್ಗಾವಣೆ ಮಾಡೋಣ. ಆಯಿತು.

ಶ್ರೀ ರಾಜು ಅಲಗೂರು: ಈ ಪ್ರಶ್ನೆಗೆ ಉತ್ತರ ಯಾವಾಗ ಸಿಗುತ್ತದೆ?

ಅಧ್ಯಕ್ಷರು: ಅದು ಬೇರೆ ಇಲಾಖೆಗೆ ಹೋಗಬೇಕು. ತಪ್ಪಾಗಿ ಬಂದಿದೆ ಅದನ್ನು ಸರಿಪಡಿಸಬೇಕು

ಶ್ರೀ ರಾಜು ಅಲಗೂರು: ಉತ್ತರ ಯಾವಾಗ ಸಿಗುತ್ತದೆ ?

ಅಧ್ಯಕ್ಷರು: ಈ ವಾರದಲ್ಲಿ ಹಾಕುತ್ತೇನೆ.

ಗ್ರಾಮಪಂಚಾಯತಿಗಳಲ್ಲಿ "ಈ" ಸ್ವತ್ತು ಮತ್ತು "ಬಿ" ಖಾತೆ ಯೋಜನೆ

567; ಶ್ರೀ ನಾರಾಯಣಸ್ವಾಮಿ ಎಸ್.ಎನ್. (ಬಂಗಾರಪೇಟೆ)

ಅ) "ಇ" ಸ್ವತ್ತು ಯೋಜನೆಯನ್ನು ರಾಜ್ಯಾದ್ಯಂತ ಅನುಷ್ಠಾನಗೊಳಿಸಲಾಗಿದೆಯೇ, ಈ ಸಂಬಂಧ ಅಧಿಕಾರಿಗಳಿಗೆ ತರಬೇತಿ ನೀಡಲಾಗಿದೆಯೇ,

ಆ) "ಇ" ಸ್ವತ್ತು ಪ್ರಕ್ರಿಯೆಯಲ್ಲಿ ಆಸ್ತಿಗಳ ನೋಂದಣಿ ಕಾರ್ಯ ಪೂರ್ಣ ಗೊಂಡಿದೆಯೇ:

ಇ) ಪೂರ್ಣಗೊಂಡಿದ್ದಲ್ಲಿ, ಬಂಗಾರಪೇಟೆ ತಾಲ್ಲೂಕಿನ 37 ಗ್ರಾಮ ಪಂಚಾಯತಿಗಳಲ್ಲಿ ಇರುವ ಸ್ವತ್ತಿನ ವಿವರಗಳನ್ನು ನೀಡುವುದು,

ಈ) ಗ್ರಾಮ ಪಂಚಾಯತಿಗಳಲ್ಲಿ 'ಬಿ'ಖಾತೆ ನಿರ್ವಹಣೆ ಮಾಡುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ,

ಉ) ಹಾಗಿದ್ದಲ್ಲಿ, ಖಾತೆ ನಿರ್ವಹಣೆಗೆ ಅಳವಡಿಸುವ ಮಾನದಂಡಗಳೇನು ಮತ್ತು ಇದರ ಅಗತ್ಯತೆಯ ಬಗ್ಗೆ ಮಾಹಿತಿ ನೀಡುವುದು?

ಶ್ರೀ ಹೆಚ್.ಕೆ. ಪಾಟೀಲ್ (ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು)

ಅ) ರಾಜ್ಯದ ಗ್ರಾಮ ಪಂಚಾಯತಿಗಳ ವ್ಯಾಪ್ತಿಯಲ್ಲಿನ ಆಸ್ತಿಗಳಿಗೆ ಸಂಬಂಧಿಸಿದಂತೆ ನಮೂನೆ 9 ಮತ್ತು 11ನ್ನು ಆನ್‌ಲೈನ್ ಮೂಲಕ ವಿತರಿಸುವ ಸಲುವಾಗಿ "ಇ" ಸ್ವತ್ತು ತಂತ್ರಾಂಶವನ್ನು ಅಭಿವೃದ್ಧಿ ಪಡಿಸಲಾಗಿದ್ದು, ಗ್ರಾಮ ಪಂಚಾಯತಿಗಳು ನಮೂನೆ 9 ಮತ್ತು 11ನ್ನು ದಿನಾಂಕ: 15–06–2013ರಿಂದ ಇ–ಸ್ವತ್ತು ತಂತ್ರಾಂಶದ ಮೂಲಕ ಮಾತ್ರ ವಿತರಿಸುತ್ತಿವೆ.

ಇ–ಸ್ವತ್ತು ತಂತ್ರಾಂಶದ ಬೆಳಕಿಗೆ ಸಂಬಂಧಪಟ್ಟಂತೆ ಈಗಾಗಲೇ ಎನ್.ಐ.ಸಿ ಮುಖಾಂತರ ಜಿಲ್ಲಾ ಪಂಚಾಯತಿಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಉಪಕಾರ್ಯದರ್ಶಿಗಳು, ತಾಲ್ಲೂಕು ಪಂಚಾ ಯತಿಯ ಕಾರ್ಯನಿವಾಹಕ ಅಧಿಕಾರಿಗಳು, ಗ್ರಾಮಪಂಚಾಯತಿಯ ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳು, ಗ್ರಾಮ ಪಂಚಾಯತಿ ಕಾರ್ಯದರ್ಶಿಗಳು ಮತ್ತು ದ್ವಿತೀಯ ದರ್ಜೆ ಲೆಕ್ಕ ಸಹಾಯಕರುಗಳಿಗೆ ತರಬೇತಿ ನೀಡಲಾಗಿದೆ.

ಆ) ತೆರಿಗೆ ನಿರ್ಧರಿಸಲು, ವಸೂಲಿ ಮಾಡಲು ನಮೂನೆ 9 ಮತ್ತು 11 ಗ್ರಾಮ ಪಂಚಾಯತಿಗಳಿಗೆ ಅತ್ಯಗತ್ಯವಾಗಿ ಬೇಕಾಗಿರುತ್ತದೆ. ಕರ್ನಾಟಕ ಪಂಚಾಯತ್‌ರಾಜ್ ಅಧಿನಿಯಮ, 1993ರ ಪ್ರಕರಣ 199 ರನ್ವಯ

ಗ್ರಾಮ ಪಂಚಾಯತಿಗಳು ಸ್ಥಳೀಯ ಸ್ವಯಂ ಸರ್ಕಾರಗಳಾಗಿದ್ದು, ಕರಗಳನ್ನು ವಸೂಲಿ ಮಾಡಲು ಪ್ರದತ್ತ ಅಧಿಕಾರವನ್ನು ಪಡೆದಿವೆ. ಸುತ್ತೋಲೆ ಸಂಖ್ಯೆ ಆರ್‌ಡಿ 344 ಮುನೋಮು 2005 ದಿ: 06–04–2009 ರನ್ವಯ ನಮೂನೆ 9 ಮತ್ತು 11ನ್ನು ಕಂದಾಯ ಇಲಾಖೆಯು 2013 ರ ತಿದ್ದುಪಡಿಯಂತೆ ಗ್ರಾಮ ಪಂಚಾಯತಿ ವ್ಯಾಪ್ತಿಯಲ್ಲಿ ಬರುವ ಕೃಷಿಯೇ ತರ ಆಸ್ತಿಗಳ ನೋಂದಣಿಗೆ ಈ ದಾಖಲೆಗಳನ್ನು ಕಡ್ಡಾಯಗೊಳಿಸಿದೆ. ತಮ್ಮ ಆಸ್ತಿಗಳನ್ನು ಮಾರಾಟ ಮಾಡಲು ಬಯಸುವ ಸಾರ್ವಜನಿಕರು ನಮೂನೆ 9 ಮತ್ತು 11ನ್ನು ಪಡೆಯಲು ಗ್ರಾಮ ಪಂಚಾಯತಿಗಳಿಗೆ ಅರ್ಜಿ ಸಲ್ಲಿಸಬೇಕಿದೆ.

ಇ) ಬಂಗಾರಪೇಟೆ ತಾಲ್ಲೂಕಿನ 37 ಗ್ರಾಮ ಪಂಚಾಯತಿಗಳ 90157 ಆಸ್ತಿ ಗಳನ್ನು ಪಂಚತಂತ್ರ ತಂತ್ರಾಂಶದಲ್ಲಿ ಅಳವಡಿಸಲಾಗಿದ್ದು, ಇ–ಸ್ವತ್ತು ತಂತ್ರಾಂಶದ ಮೂಲಕ ಯಾವುದೇ ಗ್ರಾಮಪಂಚಾಯತಿಗಳಲ್ಲಿ ಆಸ್ತಿಗಳಿಗೆ ಸಂಬಂಧಿಸಿದಂತೆ ನಮೂನೆ 9 ಮತ್ತು 11ನ್ನು ನೀಡಿರುವುದಿಲ್ಲ.

ಈ) ಕ್ರಮಬದ್ಧವಲ್ಲದ ಆಸ್ತಿಗಳಿಗೆ ಸಂಬಂಧಿಸಿದಂತೆ ತೆರಿಗೆ ನಿರ್ಧರಣೆ ಪಟ್ಟಿ (ನಮೂನೆ–11 ಬಿ) ನೀಡಲು ಕರ್ನಾಟಕ ಪಂಚಾಯತ್ (ಗ್ರಾಮ ಪಂಚಾಯತಿಗಳ ಆಯ–ವ್ಯಯ ಮತ್ತು ಲೆಕ್ಕಪತ್ರಗಳು) ನಿಯಮಗಳು 2006ರ ನಿಯಮ 30ಕ್ಕೆ ತಿದ್ದುಪಡಿ ತರಲು ಕ್ರಮವಹಿಸಲಾಗುತ್ತಿದೆ

ಉ) ನಮೂನೆ–11ಬಿನ್ನು ಗ್ರಾಮ ಪಂಚಾಯತಿಗಳು ವಿತರಿಸಲು ಅನುಸರಿಸ ಬೇಕಾದ ಕಾರ್ಯವಿಧಾನ ಅಥವಾ ನಿರ್ವಹಣೆ ಬಗ್ಗೆ ಸುತ್ತೋಲೆ ಮೂಲಕ ನಿರ್ದೇಶನ ನೀಡಲಾಗುವುದು

ನಮೂನೆ–11ಬಿಯನ್ನು ಆಸ್ತಿಗಳ ಮಾರಾಟ ಮಾಡಲು ನೋಂದಾಯಿ ಸಬಹುದಾಗಿದೆ.

ಶ್ರೀ ನಾರಾಯಣಸ್ವಾಮಿ ಎಸ್.ಎನ್: ಉತ್ತರ ಕೊಟ್ಟಿದ್ದಾರೆ, ಆದರೆ ಅದು ಸಮಂಜಸವಾಗಿಲ್ಲ, ಇವರು ದಿನಾಂಕ: 15–06–2013ರಿಂದ ಇ–ಸ್ವತ್ತು

ತಂತ್ರಾಂಶದ ಮೂಲಕ ಮಾತ್ರ ವಿತರಿಸುತ್ತೇವೆ ಎಂದು ಹೇಳಿದ್ದಾರೆ. ಆದರೆ, ನೀವು ಒಂದು ವೇಳೆ ಇ–ಸ್ವತ್ತು ಖಾತೆ ವಿತರಣೆ ಮಾಡುತ್ತಿದ್ದರೆ ದಿನಾಂಕ 15/06/2013 ರಿಂದ ರಾಜ್ಯಾದ್ಯಂತ site registration ಏಕೆ stop ಆಯಿತು?

ಶ್ರೀ ಹೆಚ್.ಕೆ ಪಾಟೀಲ್: ರಾಜ್ಯದಲ್ಲಿ ಜನರಿಗೆ ಒಂದು ರೀತಿ ಕುತೂಹಲ, ಅನಾನುಕೂಲವಾಗಿರುವ ಬಗ್ಗೆ ಮಾನ್ಯ ಸದಸ್ಯರು ಪ್ರಶ್ನೆ ಕೇಳಿದ್ದಾರೆ. ಇ–ಸ್ವತ್ತು ಮೂಲಕ ನಾವೇನು ವ್ಯವಸ್ಥೆಯನ್ನು ಬದಲಾಯಿಸಿದ್ದೇವೆ, ನಾವು ಹೆಚ್ಚಿನದ್ದೇನನ್ನೂ ಮಾಡಿಲ್ಲ. ಏನು ನಿಯಮಗಳು, ಕಾನೂನುಗಳು ಇದ್ದವು, ಅವುಗಳನ್ನು personal discretion ಮೇಲೆ ಅಧಿಕಾರಿಗಳು ಏನು ಬೇರೆ ಬೇರೆ ರೀತಿಯಾಗಿರುವ ಸವಲತ್ತು ಕೊಟ್ಟಿದ್ದರು, ಆ ಸವಲತ್ತನ್ನು ಇ–ಸ್ವತ್ತು ಬಂದಮೇಲೆ computer ಕೊಡುವುದಕ್ಕೆ ಸಾಧ್ಯವಿರಲಿಲ್ಲ, ನಿಯಮಾನುಸಾರ ಮಾತ್ರ ಫಾರಂ ನಂ 9 ಮತ್ತು 11 ಅನ್ನು ಕೊಡುವುದಕ್ಕೆ ಸಾಧ್ಯವಿತ್ತು ಆ ಹಿನ್ನೆಲೆಯಲ್ಲಿ ಬಹಳಷ್ಟು ಅನಾನುಕೂಲ ಪ್ರಾರಂಭವಾಯಿತು ಕೆಲವು ಕಡೆ NA ಆಗಿರಲಿಲ್ಲ. ಆದರೆ, ನಮಗೆಲ್ಲರಿಗೂ ಗೊತ್ತಿತ್ತು, 50ವರ್ಷಗಳಿಂದ ಆ property ಇದೆ. ಎಂದು Title ಸರಿ ಇರಲಿಲ್ಲ. ಇಂಥ ಹಲವಾರು ಕಾರಣಗಳು ಏನಿದ್ದವು, ಆ ಹಿನ್ನೆಲೆಯಲ್ಲಿ ನಾವು ಇಸ್ವತ್ತಿನ ಮೊದಲನೇ ಸುತ್ತೋಲೆ ಇತ್ತು, ಆ ಸುತ್ತೋಲೆಯನ್ನು ಬದಲಾಯಿಸಬೇಕಾಗಿರುವ ಅವಶ್ಯತೆ ಅನಿವಾರ್ಯತೆ ಬಂದಿತ್ತು. ಆ ಹಿನ್ನೆಲೆಯೊಳಗೆ 11–ಬಿಯನ್ನು ನಾವು ಪ್ರಾರಂಭ ಮಾಡಿ ಆಸ್ತಿಗಳನ್ನು ಮಾರಾಟ ಮತ್ತು ಖರೀದಿ ಮಾಡುವಂಥ ಸಂಧರ್ಭದಲ್ಲಿ 11–ಬಿಯ ಮೇಲೆ register ಮಾಡಿಕೊಳ್ಳುವುದಕ್ಕೆ ಅವಕಾಶ ಕೊಟ್ಟಿದ್ದೇವೆ. ಈಗ ನಮಗೆ ಬಂದಿರತಕ್ಕಂಥ feedback ಪ್ರಕಾರ ಇತ್ತೀಚೆಗೆ computer ನಲ್ಲಿ software ನಲ್ಲಿ ಏನು ಬದಲಾವಣೆಯಾಗಬೇಕಾಗಿತ್ತೋ 10ದಿನಗಳ ನಂತರ ಸಂಪೂರ್ಣವಾಗಿ ಬದಲಾವಣೆಯಾಗಿದೆ. ಆ ಬದಲಾವಣೆಯ ನಂತರ 11–ಬಿ ಮೂಲಕ ಯಾವ ಅನಾನುಕೂಲತೆ ಕಂಡು ಬರುತ್ತಿತ್ತೋ ಅದು ಕಡಿಮೆಯಾಗಿದೆ. ವಿವರವಾದ ಮಾಹಿತಿ ತಮ್ಮ ಬಳಿ ಇದ್ದರೆ ಕೊಡಬೇಕು

ನಾವೇನು ಈಗ ಹೊಸ ಪ್ರಯೋಗ ಮಾಡುತ್ತಿದ್ದೇವೆ, ಆಪ್ರಯೋಗದಲ್ಲಿ ಇನ್ನೂ ಹೆಚ್ಚಿನ ಬದಲಾವಣೆಯನ್ನು ಸೂಚಿಸಿದರೆ ನಾನು ಅದನ್ನು ಸ್ವೀಕಾರ ಮಾಡುತ್ತೇನೆ

ಶ್ರೀ ನಾರಾಯಣಸ್ವಾಮಿ ಎಸ್ ಎನ್: ಮಾನ್ಯ ಸಚಿವರೆ ನನ್ನಪ್ರಶ್ನೆ ಅದಲ್ಲ ತಾವೇನು ಹೇಳಿದಿರಿ ನಾಲ್ಕು ತಿಂಗಳ ಹಿಂದೆ e-procurement ನಲ್ಲಿ 'ಬಿ' ಖಾತೆ ನಮಗೆ ಕೊಟ್ಟಿದ್ದರೆ ಏಕೆ ನೋಂದಣಿಯಾಗಲಿಲ್ಲ? ಉದಾಹರಣೆಗೆ ಹೇಳುವುದಾದರೆ ನನ್ನ ಕೋಲಾರ ಜಿಲ್ಲೆಯಲ್ಲಿ ಒಂದೇ ಒಂದು ಗ್ರಾಮ ಪಂಚಾಯತಿಯಲ್ಲೂ ಇವತ್ತಿಗೂ ಕೂಡ ಇ–ಸ್ವತ್ತು ವಿತರಣೆ ಮಾಡುವುದಕ್ಕಾಗುತ್ತಿಲ್ಲ. ಅದನ್ನು ನನ್ನ ಪ್ರಶ್ನೆ ಸಂಖ್ಯೆ (ಇ) ಯ ಉತ್ತರದಲ್ಲಿ ತಾವೇ ಒಪ್ಪಿಕೊಂಡಿದ್ದೀರಿ, ಬಂಗಾರಪೇಟೆ ತಾಲ್ಲೂಕಿಗೆ ಸಂಬಂಧಪಟ್ಟಂತೆ 37ಗ್ರಾಮ ಪಂಚಾಯತಿಗಳಲ್ಲಿ ಇ–ಸ್ವತ್ತನ್ನು ಅಳವಡಿಸಿದ್ದೇವೆ, ವಿತರಣೆ ಮಾಡಿರುವುದಿಲ್ಲವೆಂದು ತಾವು ಹೇಳುತ್ತೀರಿ, ಅದರ ಉದ್ದೇಶ ಒಂದು ವೇಳೆ ಅಳವಡಿಸಿದರೆ ವಿತರಣೆ ಆಗದಿದ್ದರೆ, ಖಾತೆದಾರರು ನೋಂದಣಿಗೆ ಅಥವಾ ಬ್ಯಾಂಕ್ ಸಾಲಕ್ಕೆ ಖಾತೆ ಬೇಕಾದಾಗ ಖಾತೆ ಇಲ್ಲದಿದ್ದಾಗ ಅವರು ಎಲ್ಲಿಗೆ ಹೋಗಬೇಕು. ತಾವೇಕೆ ವಿತರಣೆ ಮಾಡಲಿಲ್ಲವೆಂದು ತಾವು ದಯಮಾಡಿ ತಿಳಿಸಬೇಕು.

ಶ್ರೀ ಹೆಚ್.ಕೆ. ಪಾಟೀಲ್: ತಮಗೆ ಗೊತ್ತಿರುವ ಹಾಗೆ ಮೊದಲೇನು form ಗಳಿದ್ದವು ಅವುಗಳನ್ನು officers handle ಮಾಡುತ್ತಿದ್ದರು ಅವರಿಗೆ discretion ಇರುತ್ತಿತ್ತು. NA ಆಗಿಲ್ಲದಿದ್ದರೂ ಸಹ register ಮಾಡಿ ಕೊಡುವಂಥದ್ದು ನಡೆದಿತ್ತು. ಇ–ಸ್ವತ್ತು ಬಂದ ನಂತರ ಯಾವ್ಯಾವುದು ಕಾನೂನು ಪ್ರಕಾರ ಇರಬೇಕಾಗಿತ್ತು, ಅವು ಇಲ್ಲವೆಂದರೆ ನಿಮಗೆ ಯಾವ ಕಾರಣಕ್ಕೂ ಸಹ transfer of property ಆಗುತ್ತಿರಲಿಲ್ಲ, ಅದಕ್ಕೇ ನಾವು 11 –B ಯನ್ನು ಮಾಡಿ relax ಮಾಡಿರುವುದು. ಆ ಹಿನ್ನೆಲೆಯಲ್ಲಿ ಇದು ಬದಲಾವಣೆಯಾಗಿದೆ ಮೊದಲನೆಯ ಇ–ಸ್ವತ್ತಿನಿಂದ ಆಗಿರುವ ಅನಾನುಕೂಲತೆಯ ಹಿನ್ನೆಲೆಯಲ್ಲಿಯೇ ಈಗ ಬದಲಾವಣೆಯನ್ನು ಮಾಡಿದ್ದೇವೆನ್ನು

ವುದನ್ನು ನಿಮ್ಮ ಕೊನೆಯ ಪ್ರಶ್ನೆ (ಉ) ಏನಿದೆ ಅದರ ಉತ್ತರದಲ್ಲಿ ನಾವು ಕಾಣಿಸಿದ್ದೇವೆ. ಅದನ್ನು ನಾನು ಉದಾಹರಿಸಿ ಹೇಳುತ್ತಿದ್ದೇನೆ

ಶ್ರೀ ನಾರಾಯಣಸ್ವಾಮಿ ಎಸ್.ಎನ್: ಮಾನ್ಯ ಅಧ್ಯಕ್ಷರೆ, ಉತ್ತರ ಸಮಂಜಸ ವಾಗಿಲ್ಲ ನಾವು ಕೇಳುವಂಥದ್ದು, ಬಂಗಾರಪೇಟೆ ತಾಲ್ಲೂಕಿನಲ್ಲಿ ಇದುವರೆಗೂ ಕೊಡ ತಾವು 11–ಎ ಯನ್ನು ಮಾಡದೇ ಇರಬೇಕಾದರೆ 11–ಬಿಯ ಮಾತೇ ಬರುವುದಿಲ್ಲ. 11–ಬಿಗೆ ಸಂಬಂಧಪಟ್ಟಿದ್ದು ಬೇರೆ ವಿಚಾರ ಆದರೆ ಈ ಅಧಿಕಾರಿ ಗಳೇನು ಮಾಡಿದ್ದಾರೆಂದರೆ, ತಮಗೆ ತಪ್ಪು ಮಾಹಿತಿಯನ್ನು ಕೊಡುತ್ತಿದ್ದಾರೆ ಏಕೆಂದರೆ e-procurementನಲ್ಲಿ ಖಾತೆಯನ್ನೇ issue ಮಾಡದೇ ಇರಬೇ ಕಾದರೆ, ನೋಂದಣಿ ಖಾತೆ ಮಾಡಿಲ್ಲ

ಅಧ್ಯಕ್ಷರು: ನಾರಾಯಣಸ್ವಾಮಿಯವರೇ, ಇದು ಸ್ವಲ್ಪ ಕ್ಲಿಷ್ಟವಾದಂಥ ಪ್ರಶ್ನೆಯಾಗಿದೆ. ಎಲ್ಲ ಜನರಿಗೂ ಇದು ಅರ್ಥವಾಗಬೇಕಾಗಿದೆ. ನನಗೆ ಇದು ಅರ್ಥವಾಗಿಲ್ಲ. ಆದ್ದರಿಂದ ಇದನ್ನು ಚರ್ಚೆಗೆ ಹಾಕಿಕೊಂಡು ವಿವರವಾಗಿ ಚರ್ಚೆ ಮಾಡಿದರೆ ಉತ್ತರ ತೆಗೆದುಕೊಳ್ಳಲು ಆಗುತ್ತದೆ.

ಶ್ರೀ ನಾರಾಯಣಸ್ವಾಮಿ ಎಸ್.ಎನ್: ನನ್ನ ಪ್ರಶ್ನೆ ಎರಡಕ್ಕೆ ಉತ್ತರ ಕೊಡಿ.

ಅಧ್ಯಕ್ಷರು: ಬೇಡ, time ಕೊಟ್ಟು ಈ ಬಗ್ಗೆ ವಿವರವಾಗಿ ಚರ್ಚೆ ಮಾಡೋಣ.

ಶ್ರೀ ನಾರಾಯಣಸ್ವಾಮಿ ಎಸ್.ಎನ್: ಆಗಬಹುದು.

ಅಧ್ಯಕ್ಷರು: ಆಯಿತು, ಆಮೇಲೆ ಚರ್ಚೆಗೆ ಹಾಕಿಕೊಳ್ಳೋಣ ಶಿವರಾಜ್ ಪಾಟೀಲ್‌ರವರೇ, ನೀವು ಮೊದಲನೆಯ ಪ್ರಶ್ನೆ ಕೇಳಿ ಆಗ ನಾನು ಕರೆದಾಗ ನೀವು ಇರಲಿಲ್ಲ.

ಡಾ: ಎ.ಬಿ. ಮಾಲಕರೆಡ್ಡಿ. ನನ್ನದೊಂದು ಪ್ರಶ್ನೆ ಇತ್ತು ಬಿಟ್ಟುಹೋಗಿದೆ

ಅಧ್ಯಕ್ಷರು: ನಾನು ಕರೆದಾಗ ನೀವು ಇರಲಿಲ್ಲ, ಬಿಟ್ಟು ಹೋಯಿತು

ಡಾ: ಎ.ಬಿ. ಮಾಲಕರೆಡ್ಡಿ: ಈಗ ಸಚಿವರಿದ್ದಾರೆ, ಅವಕಾಶ ಕೊಡಿ.

ಅಧ್ಯಕ್ಷರ: ಅವರದಾದ ಮೇಲೆ ನೀವು ಕೇಳಿ

ರಾಯಚೂರು ನಗರ ವಿಧಾನಸಭಾ ಕ್ಷೇತ್ರದ ಗ್ರಾಮೀಣ ರಸ್ತೆಗಳ ದುರಸ್ತಿ

608; ಡಾ: ಶಿವರಾಜ್ ಪಾಟೀಲ್ ಎಸ್ (ರಾಯಚೂರು ನಗರ)

ಅ) ರಾಯಚೂರು ನಗರ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಬರುವ ಗ್ರಾಮೀಣ ರಸ್ತೆಗಳು ಸಂಪೂರ್ಣ ಹಾಳಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಹಾಗಿದ್ದಲ್ಲಿ ಈ ರಸ್ತೆಗಳನ್ನು ದುರಸ್ತಿಪಡಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು;

ಇ) ಕಳೆದ 3 ವರ್ಷಗಳಲ್ಲಿ ಗ್ರಾಮೀಣ ರಸ್ತೆಗಳ ದುರಸ್ತಿಗಾಗಿ ಸರ್ಕಾರ ನಿಗದಿಪಡಿಸಿ, ಬಿಡುಗಡೆ ಮಾಡಿರುವ ಮತ್ತು ವೆಚ್ಚವಾಗಿರುವ ಮೊತ್ತವೆಷ್ಟು; (ವರ್ಷವಾರು ವಿವರಗಳನ್ನು ನೀಡುವುದು)

ಈ) ಹಾಳಾಗಿರುವ ಗ್ರಾಮೀಣ ರಸ್ತೆಗಳ ದುರಸ್ತಿ ಕಾಮಗಾರಿಯು ಕಳಪೆ ಮಟ್ಟದ್ದಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?;

ಉ) ಹಾಗಿದ್ದಲ್ಲಿ ಕಳಪೆ ಮಟ್ಟದ ಕಾಮಗಾರಿಗಳನ್ನು ನಿರ್ವಹಿಸಿದ ಗುತ್ತಿಗೆದಾರರ ಮೇಲೆ ಸರ್ಕಾರ ಕೈಗೊಂಡಿರುವ ಕ್ರಮಗಳೇನು;

ಶ್ರೀ ಎಚ್.ಕೆ. ಪಾಟೀಲ್ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು)

ಅ) ಬಂದಿದೆ.

ಆ) ಪ್ರತಿವರ್ಷ ಗ್ರಾಮೀಣ ರಸ್ತೆಗಳ ನಿರ್ವಹಣೆ/ಅಭಿವೃದ್ಧಿಗಾಗಿ ವಿವಿಧ ಕಾರ್ಯಕ್ರಮ/ಲೆಕ್ಕಶೀರ್ಷಿಕೆಯಡಿ ಜಿಲ್ಲಾ ಪಂಚಾಯತಿಗಳಿಗೆ ಅನುದಾನ ಒದಗಿಸಲಾಗುತ್ತಿದೆ ಹೀಗೆ ಜಿಲ್ಲಾ ಪಂಚಾಯತಿಗೆ ಲಭ್ಯವಾಗುವ ಅನುದಾನದಲ್ಲಿ ರಸ್ತೆಗಳನ್ನು ಆದ್ಯತೆ ಮೇರೆಗೆ ದುರಸ್ತಿಪಡಿಸಲಾಗುವುದು.